PW – 1

ದಿನಾಂಕಃ 11.02.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ –

ಅಪಘಾತದ ಬಗ್ಗೆ ಪೊಲೀಸರಿಗೆ ನಾನೇ ದೂರು ನೀಡಿದ್ದೇನೆ ಎಂದರೆ ಸರಿ. ನಾನು 8 ನೇ ತರಗತಿ ವರೆಗೆ ಓದಿರುತ್ತೇನೆ. 1 ನೇ ಎದುರುದಾರ ನನ್ನ ಅಣ್ಣ ಎಂದರೆ ಸರಿ. ನಾವಿಬ್ಬರೂ ಖಾಸಾ ಸಹೋದರರರು ಎಂದರೆ ಸರಿ. ಅಪಘಾತದ ಸಮಯದಲ್ಲಿ ನನ್ನ ಮಗ 1 ನೇ ಎದುರುದಾರನ ಮೋಟಾರ್ ಸೈಕಲ್ ನಲ್ಲಿ ಪ್ರಯಾಣಿಸುತ್ತಿದ್ದರು ಎಂದರೆ ಸರಿ. ನಾನು ನನ್ನ ಸಹೋದರಚೆನ್ನಾಗಿರುವುದರಿಂದ ಆತ ನನ್ನ ಮಗನನ್ನು ಬೇಕರಿಗೆ ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿ. ನಾವಿಬ್ಬರೂ ಒಂದೇ ಡೋರ್ ನಂಬರ್ ನ ಕೆಳಗಿನ ಮತ್ತು ಮಹಡಿ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ಸದರಿ ಮನೆಯ ಮಾಲೀಕರು ನನ್ನ ತಾಯಿ. ಆಕೆ ಅದೇ ಮನೆಯಲ್ಲಿ ಇದ್ದಾರೆ. ಪೊಲೀಸ್ ದಾಖಲೆಗಳ ಪ್ರಕಾರ 1 ನೇ ಎದುರುದಾರನಿಗೆ ಡಿ ಎಲ್ ಇಲ್ಲ ಎಂದು ತಿಳಿದು ಬಂದಿದೆ ಎಂದರೆ ಆತನ ಬಳಿ ಡಿ ಎಲ್ ಇದೆ ಎಂದು ಉತ್ತರಿಸಿರುತ್ತಾರೆ.

ಮುಂದಿನ ಪಾಟೀ ಸವಾಲಿಗೆ ಸಮಯ ನೀಡಲಾಯಿತು.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ